ಆ) ಕಪಾರ್ಟ ಸಂಸ್ಥೆಯ ಪ್ರಾದೇಶಿಕ ಕಚೇರಿಯು ಕರ್ನಾಟಕ, ಕೇರಳ, ಗೋವಾ ಮತ್ತು ಲಕ್ಷ ದ್ವೀಪ ಈ ನಾಲ್ಕು ರಾಜ್ಯಗಳನ್ನೊಳಗೊಂಡು ಕಾರ್ಯ ನಿರ್ವಹಿಸುತ್ತಿರುವುದರಿಂದ ಆಯಾ ರಾಜ್ಯದ ಸರ್ಕಾರಗಳ ಪ್ರತಿನಿಧಿಗಳು ಮಂಜೂರಾತಿಯ ಸಭೆಯಲ್ಲಿ ಸದಸ್ಯರಾಗಿ ಪಾಲ್ಗೊಳ್ಳುತ್ತಿರುತ್ತಾರೆ. ಕಳೆದ 3ನೇ ಪ್ರಾದೇಶಿಕ ಕಚೇರಿಯ ಸಭೆಯನ್ನು ತಾ. 29-2-2000ದಂದು ನಡೆಸಲಾಯಿತು. ಇದರಲ್ಲಿ ರಾಜ್ಯದ ಹಿರಿಯ ಅಧಿಕಾರಿಯೊಬ್ಬರು ಭಾಗವಹಿಸಿರುತ್ತಾರೆ.

ಮಂಗಳೂರು ಸರ್ಕಾರಿ ಆಸ್ಪತ್ರೆಗಳಲ್ಲಿ ವಿದ್ಯುತ್ ಬಾಕಿ.

2769 (3256) ಶ್ರೀ ಯೋಗೀಶ್ ಭಟ್. ಎನ್. (ಮಂಗಳೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಸರ್ಕಾರಿ ಅಧೀನದ ಸಾರ್ವಜನಿಕ ಲೇಡಿಗೋಷನ್ ಮಹಿಳಾ ಆಸ್ಪತ್ರೆ ವಿದ್ಯುತ್ ಬಾಕಿ ನಿಲ್ಲಿಸಿ ಕೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಎಷ್ಟು ಹಣ ಪಾವತಿ ಮಾಡಬೇಕಾಗಿದೆ?

ಇ) ಈ ಆಸ್ಪತ್ರೆಗೆ ವಿದ್ಯುತ್ ಪ್ರಸರಣ ನಿಲ್ಲಿಸುವುದಾಗಿ ತಿಳಿಸಿರುವುದು ನಿಜವೇ?

ಈ) ಇದರಿಂದ ಮಂಗಳೂರು ಜನರಿಗೆ ತೊಂದರೆಯಾಗುತ್ತಿರುವುದು ನಿಜವೇ?

ಡಾ॥ ಎ. ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ರೂ. 70,55,863.00ಗಳನ್ನು ಪಾವತಿಸಬೇಕಾಗಿದೆ. (ರೂ. ಎಪ್ಪತ್ತು ಲಕ್ಷದ ಐವತ್ತೈದು ಸಾವಿರದ ಎಂಟುನೂರ ಅರವತ್ತ ಮೂರು ಮಾತ್ರ)

ಇ) ಹೌದು.

ಈ) ವಿದ್ಯುತ್‌ನ್ನು ಈ ವರೆಗೆ ಕಡಿತಗೊಳಿಸಿಲ್ಲ. ಸಾರ್ವಜನಿಕರ ಹಿತದೃಷ್ಟಿಯಿಂದ ವಿದ್ಯುತ್ ಸರಬರಾಜನ್ನು ಕಡಿತಗೊಳಿಸದಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವನ್ನು ಕೋರಿದೆ.

ಚನ್ನಗಿರಿ ಕ್ಷೇತ್ರದಲ್ಲಿ ಗ್ರಾಮೀಣ ಕಿರು ನೀರು ಪೂರೈಕೆ

2770 (3422) ಶ್ರೀ ವಡ್ನಾಳ್ ರಾಜಣ್ಣ (ಚೆನ್ನಗಿರಿ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚೆನ್ನಗಿರಿ ಕ್ಷೇತ್ರದಲ್ಲಿ ಗ್ರಾಮೀಣ ಕಿರು ನೀರು ಪೂರೈಕೆ ಯೋಜನೆಯಲ್ಲಿ ಎಷ್ಟು ಗ್ರಾಮಗಳಿಗೆ ನೀರಿನ ವ್ಯವಸ್ಥೆ ಮಾಡಲಾಗಿದೆ;

ಆ) ಉಳಿದ ಗ್ರಾಮಗಳಿಗೆ ಕಿರು ನೀರು ಪೂರೈಕೆ ಯೋಜನೆಗಳನ್ನು ಎಂದು ಕೈಗೊಳ್ಳಲಾಗುವುದು;

ಇ) ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಿ ಎಷ್ಟು ಗ್ರಾಮಗಳಿಗೆ ನೀರಿನ ಪೂರೈಕೆ ವ್ಯವಸ್ಥೆ ಮಾಡಲಾಗುವುದು;